ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	125
ಸದಸ್ಯರ ಹೆಸರು	:	ಶ್ರೀ ರಘುನಾಥ ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	04.02.2021
ಉತ್ತರಿಸಬೇಕಾದ ಸಚಿವರು	:	ಮಾನ್ಯ ಮುಖ್ಯಮಂತ್ರಿರವರು

ಕ್ರ.ಸಂ	ಪ್ರಶ್ನೆಗಳು	ಉತ್ತರಗಳು
ಅ	ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಪೀಠವು ಕೆರೆಯಂಗಳದ ಸುತ್ತಮುತ್ತ ಮತ್ತು ರಾಜಕಾಲುವೆಯ ಬಳಿ ಕಟ್ಟಡ ಇನ್ನಿತರ ಕಾಮಗಾರಿ ನಿರ್ಮಾಣ ಮಾಡುವುದಕ್ಕೆ ನಿರ್ಬಂಧ ವಿಧಿಸಿ (ಬಫರ್ ಝೋನ್) ಆದೇಶ ಹೊರಡಿಸಿರುವುದು ನಿಜವೆ;	ಹೌದು.
ಆ	ಹಾಗಿದ್ದಲ್ಲಿ, ಆದೇಶ ನೀಡಿದ್ದು ಯಾವಾಗ (ಆದೇಶದ ಪೂರ್ಣ ಮಾಹಿತಿ ನೀಡುವುದು)	ರಾಷ್ಟ್ರೀಯ ಹಸಿರು ನ್ಯಾಯಾಧೀಕರಣವು OA No. 222/2014 ರಲ್ಲಿ ದಿನಾಂಕ: 04.05.2016 ರಂದು ನೀಡಿರುವ ತೀರ್ಪಿನಲ್ಲಿ ಕೆರೆಗಳ ಸುತ್ತಮುತ್ತಲಿನ ಹಾಗೂ ರಾಜಕಾಲುವೆಗಳ ಅಂಚಿನಿಂದ ಬಫರ್ ಝೋನ್ ಅನ್ನು ಈ ಕೆಳಕಂಡಂತೆ ನಿಗಧಿಪಡಿಸಿರುತ್ತದೆ. 1. In case of Lakes, 75m from the periphery of water body to be maintained as green belt and buffer zone for all the existing water bodies i.e., lakes / wetlands. 2. 50m from the edge of the primary Rajakaluves. 3. 35m from the edges in the case of secondary Rajakaluves. 4. 25m from the edges in the case of tertiary Rajakaluves.
ಇ	ಆದೇಶವನ್ನು ಪಾಲನೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಈ ಕುರಿತು ಹೊರಡಿಸಿರುವ ಆದೇಶದ ಪ್ರತಿ ಒದಗಿಸುವುದು)	ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದ ಆದೇಶವನ್ನು ಪಾಲಿಸಲು ಸರ್ಕಾರವು ದಿನಾಂಕ: 17.05.2016 ರಂದು ನಿರ್ದೇಶಿಸಿತ್ತು. ಆದರೆ ಸರ್ಕಾರ ಮತ್ತು ಇತರೆ ಸಂಸ್ಥೆಗಳು ಸದರಿ ನಿರ್ದೇಶನಗಳನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದು, ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸಿ.ಎ. 5016/2016, ದಿನಾಂಕ 05.03.2019 ರಂದು

		ನೀಡಿರುವ ಆದೇಶದಲ್ಲಿ ಮಾನ್ಯ ಹಸಿರು ನ್ಯಾಯ ಮಂಡಳಿಯ OA No. 222/2014, ದಿನಾಂಕ: 04.05.2016 ರ ಆದೇಶಗಳನ್ನು ವಜಾಗೊಳಿಸಿ RMP-2015 ವಲಯ ನಿಯಮಾವಳಿಯಂತೆ ಕೆರೆ ಮತ್ತು ನಾಲಾಗಳಿಗೆ ಬಫರ್‌ನ್ನು ಕಾಯ್ದಿರಿಸಬೇಕೆಂದು ಆದೇಶಿಸಿರುತ್ತದೆ. ಅದರಂತೆ, ಸರ್ಕಾರದ ಪತ್ರ ಸಂಖ್ಯೆ: ನಅಇ 536 ಬೆಂಭೂಸ್ವಾ 2017, ದಿನಾಂಕ: 16.03.2019 ರನ್ವಯ ನಿಯಮಾನುಸಾರ ಕ್ರಮವಹಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಗೆ ತಿಳಿಸಲಾಗಿದೆ.
ಈ	ಬಫರ್ ಝೋನ್ ವ್ಯಾಪ್ತಿಯಲ್ಲಿ ಮನೆ ನಿವೇಶನ ಖರೀಧಿ ಮಾಡಿರುವವರಿಗೆ ಎನ್.ಜಿ.ಟಿ. ಆದೇಶದಿಂದ ತುಂಬ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಅವರ ಹಿತವನ್ನು ಕಾಯಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿವೆ (ಮಾಹಿತಿ ನೀಡುವುದು)	ಮಾನ್ಯ ಸರ್ವೋಚ್ಚ ನ್ಯಾಯಾಲಯವು ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದ ಆದೇಶವನ್ನು ವಜಾಗೊಳಿಸಿರುವುದರಿಂದ, ಅದರಂತೆ, ಕ್ರಮ ಜರುಗಿಸಲಾಗುತ್ತಿದೆ.

ಸಂಖ್ಯೆ: ನಅಇ 07 ಬೆಂಭೂಸ್ವಾ 2021

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ